ದಿನಾಂಕಃ 23.01.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ ಬಾಳೇಗದ್ದೆ ಗ್ರಾಮದ ಸ.ನಂ.339 ರಲ್ಲಿ 8 ಎಕರೆ ಜಮೀನು ಇದೆ. ಈ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿದ್ದೇನೆ. ನಾನು ಕಳೆದ 10-15 ವರ್ಷದಿಂದ ಬ್ಯಾಂಕ್ ವ್ಯವಹರಣೆಗಳನ್ನು ಮಾಡುತ್ತಿದ್ದೇನೆ. ರೂ.25,000/- ಕ್ಕಿಂತ ಹೆಚ್ಚು ಹಣ ನೀಡಬೇಕಾದರೆ ಚೆಕ್ ಮೂಲಕ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ತಿಳಿದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಕೊಟ್ಟಂತಹ ಹಣ ಕಾಫೀ ಮಾರಾಟದಿಂದ ನನಗೆ ಬಂದಿತ್ತು. ನಾನು ದಿ.01.01.2022 ರಂದು 500 ಮೂಟೆ ಕಾಫೀಯನ್ನು ಮೂಟೆಯೊಂದಕ್ಕೆ ರೂ.2000/- ರಂತೆ ಮಾರಾಟ ಮಾಡಿದ್ದೆ. ಆ ರೀತಿ ಕಾಫೀಯನ್ನು ಯಾರಿಗೆ ಮಾರಾಟ ಮಾಡಿದ್ದೆ ಎಂದು ನನಗೆ ಈಗ ನೆನಪಿಲ್ಲ. ಕಾಫೀ ಮಾರಾಟದ ಬಗ್ಗೆ ಯಾವುದೇ ರಶೀದಿ ಪಡೆದುಕೊಂಡಿಲ್ಲ.

ಕಾಫೀ ಮಾರಾಟದ ಬಾಬ್ತು ಬಂದ ಹಣದ ಬಗ್ಗೆ ನನ್ನ IT returns ನಲ್ಲಿ ಹೇಳಿಕೊಂಡಿಲ್ಲ. ನಮ್ಮ ಒಟ್ಟು ಕುಟುಂಬದಲ್ಲಿ ಪಾಲು ಆಗಿ ನಾನು ಪ್ರತ್ಯೇಕವಾಗಿ ಇದ್ದೇನೆ. ನನ್ನ ಜಮೀನು ಗೋಣೇಬೀಡು ಅಂಚೆ ವ್ಯಾಪ್ತಿಯಲ್ಲಿ ಇದೆ. ನಾನು ತ್ರಿಪುರ ಗ್ರಾಮದಲ್ಲಿ ವಾಸವಿದ್ದೇನೆ. ತ್ರಿಪುರ ಗ್ರಾಮದಲ್ಲಿ ನನ್ನ ಹೆಸರಿಗೆ ಸ್ವಂತ ಮನೆ ಇಲ್ಲ, ಆದರೆ ನಾನು ನನ್ನ ತಂದೆ-ತಾಯಿಯೊಂದಿಗೆ ವಾಸವಿದ್ದೇನೆ. ಆರೋಪಿ ದಿ.04.04.2022 ರಂದು ನನ್ನ ಮನೆಯಲ್ಲಿಯೇ ಹಣ ಕೇಳಿದ್ದರು. ಆ ಸಮಯಕ್ಕೆ ನನ್ನ ಬಳಿ ಹಣ ಇತ್ತು. ಆ ದಿನ ಆರೋಪಿಯೊಬ್ಬರೇ ಬಂದಿದ್ದು ನನ್ನ ಮನೆಯಲ್ಲಿ ನಾನೊಬ್ಬನೇ ಇದ್ದೆ. ಆ ದಿನವೇ ಆರೋಪಿಗೆ ಹಣ ಕೊಟ್ಟಿದ್ದೇನೆ. ಆರೋಪಿಗೆ ರೂ.500/- ಮುಖಬೆಲೆಯ ನೋಟುಗಳ ಮೂಲಕ ಹಣ ನೀಡಿದ್ದೇನೆ. ಈ ವಿಚಾರವನ್ನು ನನ್ನ ವಕೀಲರ ನೋಟೀಸು, ಪಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿಲ್ಲ.

ಆರೋಪಿಗೆ ಹಣ ನೀಡಿರುವ ದಿನಾಂಕದ ಬಗ್ಗೆ ನಮ್ಮ ವಕೀಲರು ಕೇಳಿದ್ದು ನಾನು ಅವರಿಗೆ ತಿಳಿಸಿರುತ್ತೇನೆ. ಪಿರ್ಯಾದು ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರ ನಾನು ಓದಿಲ್ಲ. ನಿಪಿ-1 ರ ಚೆಕ್ಕಿನಲ್ಲಿ ಬರೆದಿರುವ ಬರವಣಿಗೆಯ ಶಾಹಿ ಹಾಗೂ ಸಹಿಯ ಶಾಹಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯೇ ಚೆಕ್ಕು ಬರೆಸಿಕೊಂಡು ಬಂದು ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರ ಬರವಣಿಗೆಯನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತೇನೆ

ಎಂದರೆ ಸರಿಯಲ್ಲ. ಆರೋಪಿ ಕಳೆದ 2 ವರ್ಷಗಳಿಂದ ಬಣಕಲ್ ಗ್ರಾಮಪಂಚಾಯಿತಿಯ ಸದಸ್ಯರು. ಈ ವಿಚಾರವನ್ನು ನೋಟೀಸು ಮತ್ತು ಪಿರ್ಯಾದಿನಲ್ಲಿ ನಮೂದು ಮಾಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ಈ ಹಿಂದೆ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರವಿಲ್ಲ. ದಿ.04.04.2022 ರ ಹಿಂದೆ ನನ್ನ ಹಾಗೂ ಆರೋಪಿಯ ನಡುವೆ ಹಣದ ವ್ಯವಹಾರಗಳು ಇತ್ತು. ನಾನು ಆರೋಪಿಗೆ 2-3 ಬಾರಿ ಹಣ ಕೊಟ್ಟಿದ್ದೆ. ಆ ಮೂರು ಬಾರಿಯೂ ಸಹಾ ಆರೋಪಿಯಿಂದ ಚೆಕ್ಕು ಪಡೆದುಕೊಂಡಿಲ್ಲ. ರೂ.25000/-, ರೂ.30000/- ಮತ್ತು ರೂ.50000/- ಗಳಂತೆ ಆರೋಪಿಯು ನನ್ನ ಬಳಿ ಹಣ ಪಡೆದುಕೊಂಡಿದ್ದರು.

ಆರೋಪಿ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಾರೆ. ಕೆಲಸ ಮಾಡುವುದಾಗಿ ಆರೋಪಿ ನನ್ನ ಬಳಿ ಹಣ ಪಡೆದಿದ್ದರು. ಈ ವಿಚಾರವನ್ನು ನೋಟೀಸಿನಲ್ಲಿ ಹಾಗೂ ಖಾಸಗಿ ಪಿರ್ಯಾದಿನಲ್ಲಿ ತಿಳಿಸಲಾಗಿದೆಯಾ ಎಂದು ನನಗೆ ನೆನಪಿಲ್ಲ. ದಿ.04.04.2022 ರಂದು ನನ್ನ ಬಳಿ ರೂ.7 ಲಕ್ಷದಷ್ಟು ಹಣ ಇತ್ತು. ಆರೋಪಿ ನೀಡಿದ ಚೆಕ್ಕು ಸಂ.430666 ಆಗಿದೆ. ಆ ಚೆಕ್ಕಿನಲ್ಲಿ ಬರೆದಿರುವ IFSC ಕೋಡ್ ಮತ್ತು ಖಾತೆಯ ಸಂಖ್ಯೆ ಹೇಳಲಾಗುವುದಿಲ್ಲ. ಆರೋಪಿಯಿಂದ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ನಾನು ಹೇಳಿದಂತೆ ಯಾವುದೇ ಹಣವನ್ನು ಆರೋಪಿ ಕೊಡಬೇಕಾಗಿಲ್ಲದೇ ಇದ್ದರೂ ಸಹಾ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೂರಿಗೆರೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಯಾಕೂಬ್ ರವರ ವಿರುದ್ಧ ಚೆಕ್ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಮೂಡಿಗೆರೆ ನ್ಯಾಯಾಲಯದಲ್ಲಿ ಮೂರು ಜನರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ.

ಮುಖ್ಯ ವಿಚಾರಣೆಯಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಆರೋಪಿ ಕೊಟ್ಟಂತಹ ಚೆಕ್ ನ್ನು ಬ್ಯಾಂಕಿಗೆ ಸಲ್ಲಿಸಿದಾಗ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕೆ ವಾಪಸ್ಸು ಆಗಿದೆ ಎಂದು ಹೇಳಿ ಬರೆಸಿಲ್ಲ. ದಿ.05.05.2022 ರಂದು ಬ್ಯಾಂಕಿನಿಂದ ಹಿಂಬರಹ ನೀಡಿದ್ದಾರೆ. ಆರೋಪಿ ಕೊಟ್ಟ ಚೆಕ್ ನ್ನು ನಾನು ಬ್ಯಾಂಕಿಗೆ ಹಾಜರುಪಡಿಸಿದ್ದೇನೆ. ಚೆಕ್ ನ್ನು ಬ್ಯಾಂಕಿಗೆ ಸಲ್ಲಿಸುವಾಗ ಚೆಕ್ ನ ಹಿಂಬದಿಯಲ್ಲಿ ಸಹಿ ಮಾಡಬೇಕು ಎಂದರೆ ಸರಿಯಲ್ಲ. ಆ ರೀತಿ ಸಹಿ ಮಾಡಿದರೆ ಮಾತ್ರ ಬ್ಯಾಂಕಿನಿಂದ ಹಣ ಅಥವಾ ಹಿಂಬರಹ ನೀಡುತ್ತಾರೆ ಎಂದರೆ ಸರಿಯಲ್ಲ. ಚೆಕ್ ನ್ನು ಸ್ವೀಕರಿಸಿಕೊಂಡ ಬಗ್ಗೆ ಬ್ಯಾಂಕಿನವರು ಚೆಕ್ ನ ಮೇಲೆ ಸೀಲ್ ಹಾಕಿ ರುಜು ಮಾಡುತ್ತಾರೆ ಎಂದರೆ ಸರಿ. ನಿಪಿ-1 ರ ಚೆಕ್ ನಲ್ಲಿ ಆ ರೀತಿ ಸೀಲು ಹಾಕಿದ್ದಾರ ಎಂದು ನಾನು ನೋಡಿಲ್ಲ. ನಾನು ಆರೋಪಿಗೆ ಚೆಕ್ ನಲ್ಲಿ ನಮೂದು ಮಾಡಿರುವಷ್ಟು ಹಣ ಕೊಡದಿರುವ ಕಾರಣ ಬ್ಯಾಂಕ್ ನಲ್ಲಿ ಆದ ನಡವಳಿಕೆಯ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಬೆಟ್ಟಗೆರೆಯಿಂದ ಬಣಕಲ್ ಗೆ 4 ಕಿ.ಮೀ. ಅಂತರವಿದೆ. ಆರೋಪಿ ವಾಸವಿರುವ ಸ್ಥಳದ ಅಂಚೆ ಬಣಕಲ್ ಗೆ ಸೇರುತ್ತದೆ. ನಾನು ದಿ.05.05.2022 ರಂದು ಆರೋಪಿಗೆ ವಕೀಲರ ಮೂಲಕ ನೋಟೀಸು ಕೊಡಿಸಿದ್ದೇನೆ. ಆರೋಪಿಗೆ ನಾನು ಹಲವು ಬಾರಿ ಕರೆ ಮಾಡಿ ಹಣ ಕೇಳಿದ್ದೇನೆ. ಆನಂತರ ನೋಟೀಸು ಕೊಡಿಸಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಕರೆ ಮಾಡಿದಾಗ ಆರೋಪಿ ಹಣ ಕೊಡುತ್ತೇನೆ ಎಂದು ತಿಳಿಸಿದ್ದರು. ನಾನು ಹೇಳಿದ ಹಾಗೇ ದಿ.04.04.2022 ರಂದು ಆರೋಪಿ ನನ್ನ ಬಳಿ ರೂ.3,45,000/- ನಗದು ಹಣ ಪಡೆದುಕೊಂಡು ಅದನ್ನು ವಾಪಸ್ಸು ನೀಡುವ ಸಲುವಾಗಿ ನಿಪಿ-1 ರ ಚೆಕ್ ನ್ನು ನೀಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಕಾಫೀ ಮಾರಾಟದಿಂದ ಬಂದ ಹಣದಲ್ಲಿ ಆರೋಪಿಗೆ ಹಣ ನೀಡಿದ್ದೇ ಆದಲ್ಲಿ ಆ ಬಗ್ಗೆ ನೋಟೀಸು, ಪಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಿದ್ದೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿರುವ ಸಹಿ ನಿಪಿ-5 ರಲ್ಲಿರುವ ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ಸರಿ. ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ನಿಪಿ-5 ನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಒಂದೇ ಕಂತಿನಲ್ಲಿ ರೂ.3,45,000/- ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನನಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು ನಿಪಿ-5 ರಲ್ಲಿರುವ ಸಹಿಗಳ ಬಗ್ಗೆ ತಜ್ಞರ ವರದಿ ಪಡೆದುಕೊಳ್ಳಲು ಯಾವುದೇ ತೊಂದರೆ ಇಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.